ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.

ಪಾಟೀ ಸವಾಲುಃ 1 ಮತು 2 ನೇ ಪ್ರತಿವಾದಿ ಪರವಾಗಿ ಶ್ರೀ ಎ ಎ ಕೆ ವಕೀಲರಿಂದ

ನನ್ನ ಅಜ್ಜ ಕಲ್ಲಪ್ಪ ಮೂಲತಹ ದೇವಲಾಪೂರ ಗ್ರಾಮದವರು ಅನ್ನುವುದು ನಿಜ. ಅವರು ದೇವಲಾಪೂರ ಗ್ರಾಮದಲ್ಲಿ ಎಲ್ಲಿವರೆಗೆ ಇದ್ದರೂ ಅಂದರೆ ಸಾಕ್ಷಿದಾರರು ಅವರು ದೇವಲಾಪೂರ ಗ್ರಾಮದಲ್ಲಿ ಮತ್ತು ಬೈಲಹೊಂಗಲ ಎರಡೂ ಕಡೆಗೆ ಇದ್ದರು ಅಂತಾ ಹೇಳುತ್ತಾರೆ. ನನ್ನ ಅಜ್ಜ ಬೈಲಹೊಂಗಲದಲ್ಲಿ ಇರುತ್ತಿದ್ದರು ಅಂತಾ ತೋರಿಸಲು ದಾಖಲೆಗಳು ಇರುವುದಿಲ್ಲ ಅನ್ನುವುದು ಸುಳ್ಳು. ನಾವು ಈ ದಾವೆ ಮಾಡುವಾಗ , ನನಗೆ 68 ವರ್ಷ ವಯಸ್ಸಾಗಿತ್ತು ಅಂತಾ ಬರೆಯಿಸಿರುತ್ತೇನೆ ಅನ್ನುವುದು ನಿಜ. ನಾನು ದಿಃ 17-04-2018- ರಂದು ಸಲ್ಲಿಸಿದ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 68 ಅಂತಾ ಬರೆಯಿಸಿರುತ್ತೇನೆ ಅಂದರೆ ಸಾಕ್ಷಿದಾರರು ಸದರಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ ನೋಡಿ ನನ್ನ ವಯಸು ಎಷ್ಟು ಬರೆಯಿಸಿರುತ್ತೇನೆ ಅಂತಾ ಹೇಳುತ್ತೇನೆ ಅಂತಾ ಹೇಳುತ್ತಾರೆ

ದೇವಲಾಪೂರ ಗ್ರಾಮದ ಸರ್ವೇ ನಂಬರ 241/1, 99/2 ಎ +2 ಬ+1+2, 297/1, 298/1, 299/1, ಗ್ರಾಮ ಪಂಚಾ ನಂ 222/1, 223/1 ಅಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಅನ್ನುವುದು ನಿಜ. ದೇವಲಾಪೂರದ ಎಲ್ಲ ಅಸ್ತಿಗಳನ್ನು ಕಲ್ಲಪ್ಪನೇ ಮಾಡುತ್ತಿದ್ದಾ ಅಂದರೆ ಸಾಕ್ಷಿದಾರರು ಅವರು ಜೀವಿತ ಇರುವವರೆಗೆ ಅವರೇ ಹಿರೇತನ ಮಾಡುತ್ತಿದ್ದರು ಅಂತಾ ಹೇಳುತ್ತಾರೆ. 1955 ರಲ್ಲಿ ಕಲ್ಲಪ್ಪ ಹಾಗೂ ಆತನ ಮಕ್ಕಳ ನಡುವೆ ವಾಟ್ನಿ ಆಗಿತ್ತು ಅನ್ನುವುದು ನಿಜ. ಸದರಿ ವಾಟ್ನಿಯಲ್ಲಿ ಒಟ್ಟು ಮೂರು ಹಿಸ್ಸೆಗಳು ಅಂದರೆ ಕಲ್ಲಪ್ಪನಿಗೆ ಒಂದು ಹಿಸ್ಸೆ , ಹಾಗೂ ಆತನ ಇಬ್ಬರು ಮಕ್ಕಳಾದ ಅಣ್ಣಪ್ಪ ಅಂದರೆ ನನ್ನ ತಂದೆಗೆ ಒಂದು ಹಿಸ್ಸೆ ಮತ್ತು ಆತನ ಸಹೋದರರಾದ ನೇಮಿನಾಥಗೆ ಒಂದು ಹಿಸ್ಸೆ ಅಗಿರುತ್ತದೆ ಅನ್ನುವುದು ನಿಜ. ಸದರಿ ವಾಟ್ನಿಯಲ್ಲಿ

ಸರ್ವೇ ನಂ. 241/1 ಮತ್ತು ಸರ್ವೇ ನಂ.99/2 ಎ/1 ನನ್ನ ಅಜ್ಜ ಕಲ್ಲಪ್ಪನ ಹಿಸ್ಸೆ ಹೋಗಿರುತ್ತವೆ ಅನ್ನುವುದು ನಿಜ. ನನ್ನ ಅಜ್ಜ ಕಲ್ಲಪ್ಪ 1958 ರಲ್ಲಿ ತೀರಿಕೊಂಡ ನಂತರ ಸದರಿ ಆತನ ಎರಡೂ ಅಸ್ತಿಗಳು ನನ್ನ ತಂದೆ ಅಣ್ಣಪ್ಪನಿಗೆ ಬಂದಿರುತ್ತದೆ ಅನ್ನುವುದು ಸುಳ್ಳು . 1955 ರಲ್ಲಿ ಆದ ಪಾಲು ವಾಟ್ನಿ 9 ಜಮೀನುಗಳಿಗೆ ಸಂಬಂದಪಟ್ಟಂತೆ ವಾಟ್ನಿ ಅಗಿರುತ್ತದೆ ಅನ್ನುವುದು ನಿಜ. ಸದರಿ 9 ಜಮೀನುಗಳ ಪೈಕಿ ನನ್ನ ತಂದೆ ಅಣ್ಣಪ್ಪನಿಗೆ 5 ಜಮೀನುಗಳು ಬಂದಿರುತ್ತವೆ ಅನ್ನುವುದು ಸುಳ್ಳು .1955 ರ ವಾಟ್ನಿ ಮೇರೆಗೆ ಎಂ ಇ ನಂಬರ 1999 ದಾಖಲಾಗಿರುತ್ತದೆ ಅನ್ನುವುದು ನಿಜ. 1955 ರ ವಾಟ್ನಿ ಪತ್ರ ವನ್ನು ನೀವು ಹಾಜರು ಪಡಿಸಿರುವುದಿಲ್ಲ ಅಂದರೆ ಸಾಕ್ಷಿದಾರರು ಮೌಖಿಕವಾಗಿ ವಾಟ್ನಿ ಅಗಿರುತ್ತದೆ ಅಂತಾ ಹೇಳುತ್ತಾರೆ. 1955 ರ ಅಪಸಾತ ವಾಟ್ನಿ ಪತ್ರ ಬರೆದಿದು, ಅದೂ ನನ್ನ ಹತ್ತಿರ ಇದ್ದರೂ ಕೂಡಾ ಅದನ್ನು ನಾನು ಹಾಜರು ಪಡಿಸಿಲ್ಲ ಅನ್ನುವುದು ಸುಳ್ಳು . 1955 ರ ಅಫಸಾತ ವಾಟ್ನಿ ಪತ್ರದಲ್ಲಿ Vijay Medical & General Stores ನನ್ನ ತಂದೆಯ ಹಿಸ್ಸೆ ಬಂದಿರುತ್ತದೆ ಅಂತಾ ಬರೆದಿರುತ್ತಾರೆ ಅಂದರೆ ಸಾಕ್ಷಿದಾರರು ಅಪಸಾತ ವಾಟ್ನಿ ಪತ್ರ ಇರುವುದಿಲ್ಲ ಅಂತಾ ಹೇಳುತ್ತಾರೆ. ನನ್ನ ದಾವಾ ಪತ್ರದ ಪ್ಯಾರಾ ನಂ 5 ರಲ್ಲಿ " 1955 ರ ಅಪಸಾತ ವಾಟ್ನಿ ಮಾಡಿಕೊಂಡಿದ್ದು , ಪ್ರತ್ಯೇಕವಾದ ಸದರ ಅಫಸಾತ ವಾಟ್ನಿಯಲ್ಲಿ ಮೂಲ ಪುರುಷ ಕಲ್ಲಪ್ಪನ ಹಿರಿಯ ಮಗ ಅಣ್ಣಪ್ಪನಿಗೆ ದೇವಲಾಪೂರ ಗ್ರಾಮದಲ್ಲಿಯ ಜಮೀನುಗಳು ಮೇಸರ್ಸ Vijay Medical & General Stores ಅಂತಾ ವ್ಯಾಪಾರ ವಹಿವಾಟ ಮತ್ತು ಅನುಬಂದ ಕ ದಲ್ಲಿಯ ಅನುಕ್ರಮ ನಂಬರ 1 ರಲ್ಲಿ ಹೇಳಿದ ಮನೆಗಳು ಅವನ ಹಿಸ್ಸೆಗೆ ಬಂದಿದ್ದು " ಅಂತಾ ಬರೆದ ವಿಷಯ ನಿಜ ಇರುತ್ತದೆ . ನೀವು ಯಾವ ಅಧಾರದ ಮೇಲಿಂದ ಸದರಿ ವಿಷಯ ಬರೆಯಿಸಿದ್ದೀರಿ ಅಂದರೆ ಸಾಕ್ಷಿದಾರರು ನನಗೆ ತಿಳುವಳಿಕೆ ಇದ್ದಾಗಲೇ ವಾಟ್ನಿ ಅಗಿದರಿಂದ ನಾನು ಸದರಿ ವಿಷಯವನ್ನು ಹೇಳಿ ಬರೆಯಿಸಿರುತ್ತೇನೆ ಅಂತಾ ಹೇಳುತ್ತಾರೆ. ಮೇಸರ್ಸ Vijay Medical & General Stores ಪಾರ್ಟನರಶೀಪ ಫರ್ಮ ಅನ್ನುವುದು ನಿಜ. ಸಾಕ್ಷಿದಾರರು ಮುಂದುವರೆದ 1971 ರ ನಂತರ ಅದೂ ಪಾರ್ಟನರಶೀಪ ಫರ್ಮ ಅಗಿರುತ್ತದೆ ಅಂತಾ ಹೇಳುತ್ತಾರೆ. 1955 ರಲ್ಲಿ ಪಾಲು ವಾಟ್ನಿ ಅದ

ಸಂದರ್ಬರ್ದಲ್ಲಿ ನನಗೆ 11 ಅಥವಾ 12 ವರ್ಷ ವಯಸ್ಸು ಇದ್ದಿರಬಹುದು. Vijay Medical & General Stores ದಲ್ಲಿ ನನಗೆ ಯಾವುದೇ ಹಿಸ್ಸೆ ಇರುವುದಿಲ್ಲ ಅನ್ನುವುದು ಸುಳ್ಳು .

ನನ್ನ ತಂದೆ ಅಣ್ಣಪ್ಪ 1934 ರಲ್ಲಿ ವಕೀಲ ವೃತ್ತಿ ಪ್ರಾರಂಬಿಸಿದ್ದರು ಅನ್ನುವುದು ನಿಜ. ಅವರು 1948 ರವರೆಗೆ ವಕೀಲ ವೃತ್ತಿ ಮಾಡಿರುತ್ತಾರೆ ಅಂದರೆ ಸಾಕ್ಷಿದಾರರು 1946 ರ ವರೆಗೆ ಮಾಡಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ತಂದೆ ವಕೀಲ ವೃತ್ತಿ ಮಾಡುತ್ತಿರುವಾಗ ಅವರಿಗೆ ಶ್ರೀ ಗಿಡದಹುಬ್ಬಳ್ಳಿ ವಕೀಲರ ಸ್ನೇಹ ವಾಗಿತ್ತು ಅನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಬೈಲಹೂಂಗಲ ದಲ್ಲಿ ಡಾಕ್ಟರ ಕಾಸಮೀಸ ಇವರೂಂದಿಗೆ ಸ್ನೇಹ ಇತ್ತು ಅನ್ನುವುದು ಸುಳ್ಳು. ಈಗ ಶ್ರೀ ಗಿಡದಹುಬ್ಬಳಿ ವಕೀಲರು ಮತ್ತು ಡಾಕ್ಟರ ಕಾಸಮೀಸ ಇವರು ಜೀವಿತ ಇರುವುದಿಲ್ಲ ಅಂದರೆ ಸಾಕ್ಷಿದಾರರು ಅವರಿಬ್ಬರ ಪೂರ್ಣ ಹೆಸರು ಹೇಳಿದರೇ ತನಗೆ ಅವರು ಮೃತ ಅಗಿರುತ್ತಾರೂ ಅಥವಾ ಜೀವಂತ ಇದ್ದಾರೆ ಅಂತಾ ಹೇಳಲು ಬರುತ್ತದೆ ಅಂತಾ ಹೇಳುತ್ತಾರೆ. ನನ್ನ ತಂದೆಗೆ ವಕೀಲರ ವೃತ್ತಿಯಿಂದ ಸಾಕಷ್ಟು ಅದಾಯ ಇತ್ತು ಅನ್ನುವುದು ಸುಳ್ಳು . ನನ್ನ ತಂದೆ 1943 ನೇ ಇಸವಿಯುಲ್ಲಿ ತಮ್ಮ ಹೆಸರಿನ ಮೇಲೆ Vijay Medical & General Stores, Prosperity concern ನ್ನು ಬೈಲಹೂಂಗಲದ ವಾಸನಕೂಟದಲ್ಲಿ ಪ್ರಾರಂಬಿಸಿರುತ್ತಾರೆ ಅಂದರೆ ಸಾಕ್ಷಿದಾರರು ಮನೆಯಲ್ಲಿ ಪ್ರಾರಂಬಿಸಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ತಂದೆ 1943 ರಲ್ಲಿ ಅಂಗಡಿಯನ್ನು ಬಾಡಿಗೆಗೆ ತೆಗೆದುಕೂಂಡು ಅಲ್ಲಿ Vijay Medical & General Stores ಪ್ರಾರಂಬಸಿರುತ್ತಾರೆ ಅನ್ನುವುದು ಸುಳ್ಳು . ನನ್ನ ತಂದೆ 1943 ರಿಂದ 1953 ರವರೆಗೆ ಅದೇ ಬಾಡಿಗೆ ಅಂಗಡಿಯಲ್ಲಿ ಮೆಡಿಕಲ ಮತು Vijay Medical & General Stores ನಡೆಸಿಕೊಂಡು ಬಂದಿದ್ದರು ಅಂದರೆ ಸಾಕ್ಷಿದಾರು 1950 ರಿಂದ 1953 ರವರೆಗೆ ಬಾಡಿಗೆ ಅಂಗಡಿ ನಡೆಸುತ್ತಿದ್ದರು ಅಂತಾ ನನಗೆ ನೆನಪಿರುತ್ತದೆ ಅಂತಾ ಹೇಳುತ್ತಾರೆ. 1953 ನೇ ಇಸವಿಯಲ್ಲಿ ನನ್ನ ತಂದೆ Vijay Medical & General Stores ಕೆ ಎಸ ಪಾಟೀಲ ಇವರ ಅಂಗಡಿಯಲ್ಲಿ ಅದನ್ನು

ವರ್ಗಾಯಿಸಿರುತ್ತಾರೆ ಅನ್ನುವುದು ನಿಜ. ಸದರಿ ಕೆ ಎಸ ಪಾಟೀಲ ಇವರ ಅಂಗಡಿ ಬೈಲಹೂಂಗಲದ ಬಜಾರದಲ್ಲಿ ಇರುತ್ತದೆ ಅನ್ನುವುದು ನಿಜ.

ನನಗೆ ಬೈಲಹೂಂಗಲದ ಎಮ.ಎಲ.ಎ. ಅಗಿದ್ದ ನಬಿಸಾಬ ನಾಗನೂರ ಇವರ ಪರಿಚಯ ಇತ್ತು . ಸದರಿ ನಬಿಸಾಬ ನಮಗೆ 1956 ರಲ್ಲಿ ಒಂದು ಅಂಗಡಿಯನ್ನು ಮಾರಾಟ ಮಾಡಿರುತ್ತಾರೆ ಅನ್ನುವುದು ನಿಜ. ನನ್ನ ತಂದೆ ತಮ್ಮ ವಕೀಲರ ವೃತ್ತಿಯಿಂದ ಸಂಪಾದಿಸಿದ ಹಣದಿಂದಲೇ ನಾಗನೂರ ಇವರಿಂದ ಅಂಗಡಿಯನ್ನು ಖರೀದಿ ಮಾಡಿರುತ್ತಾರೆ ಅನ್ನುವುದು ಸುಳ್ಳು . ನನ್ನ ತಂದೆ ಡಾಕ್ಟರ ಕಾಸಮೀಸ ಮತ್ತು ಗಿಡದಹುಬ್ಬಳ್ಳಿ ವಕೀಲರಿಂದ ಕೂಡಾ ಅರ್ಥಿಕ ಸಹಾಯ ಪಡೆದುಕೊಂಡಿದ್ದರು ಅನ್ನುವುದು ಸುಳ್ಳು . 1956 ರಲ್ಲಿ ನನಗೆ 12 ವರ್ಷ ವಯಸ್ಸಾಗಿತ್ತು . 1946 ರಲ್ಲಿ ನಾನು ಜನಿಸಿರಲಿಲ್ಲ ಅನ್ನುವುದು ನಿಜ. ಆದರೇ ನನ್ನ ಅಣ್ಣ ವಿಜಯ ಕುಮಾರ ಮತ್ತು ನನ್ನ ಅಕ್ಕಂದಿರು ಜನಿಸಿದ್ದರು. 1956 ರಲ್ಲಿ ನನ್ನ ಅಣ್ಣ ಅಂದರೆ 1 ನೇ ಪ್ರತಿವಾದಿ ಅನೀಲಕುಮಾರ Vijay Medical & General Stores ಅಂಗಡಿಯಲ್ಲಿ ಕುಳಿತುಕೂಳ್ಳುತ್ತಿದ್ದಾ ಅನ್ನುವುದು ಸುಳ್ಳು . 1956 ನೇ ಇಸವಿಯಲ್ಲಿ 1 ನೇ ಪ್ರತಿವಾದಿಗೆ 12 ವರ್ಷ ವಯಸ್ಸಾಗಿತು್ತ ಅನ್ನುವುದು ಸುಳ್ಳು ಆದೆರೇ ಅವನಿಗೆ 6 ವರ್ಷ ವಯಸ್ಸಾಗಿತ್ತು .

ನನ್ನ ತಂದೆ ಅಲ್ಸರ ಕಾಯಿಲೆಯಿಂದ ಬಳಲುತ್ತಿದ್ದರು ಅನ್ನುವುದು ಸುಳ್ಳು. ನನ್ನ ತಂದೆ ಯ ಅರೋಗ್ಯ ಸರಿ ಇಲ್ಲದೇ ಇದ್ದ ಕಾರಣ , 1 ನೇ ಪ್ರತಿವಾದಿ Vijay Medical & General Stores ವ್ಯವಹಾರವನ್ನು ನನ್ನ ತಂದೆಯಾಂದಿಗೆ ನೋಡಿಕೊಳ್ಳುತಿದ್ದಾ ಅನ್ನುವುದು ಸುಳ್ಳು . ನನ್ನ ತಂದೆ ನಾಗನೂರ ಇವರಿಂದ ಖರೀದಿ ಮಾಡಿದ ಅಂಗಡಿ ಹಳೆಯ ಕಟ್ಟಡವಾಗಿತ್ತು ಅನ್ನುವುದು ನಿಜ. 1 ನೇ ಪ್ರತಿವಾದಿ ಸದರಿ ಅಂಗಡಿಗೆ ಸಾಕಷ್ಟು ಹಣ ಹಾಕಿ , ಅದನ್ನು ನವಿಕರಣಗೊಳಿಸಿದ್ದರು ಅನ್ನುವುದು ಸುಳ್ಳು .

ದಿಃ 18–08–1971 ರಂದು Partnership Deed ಅಗಿರುತ್ತದ ಅನ್ನುವುದು ನಿಜ. ಸದರಿ Partnership Deed , M/s. Vijay Medical & General Stores ಅನ್ನುವ ಹೆಸರಿನ ಫರ್ಮದಲ್ಲಿ ನೋಂದ ಅಗಿರುತ್ತದೆ ಅನ್ನುವುದು ನಿಜ. ಸದರಿ ಪಾಲುದಾರಿಕೆ ಸಂಸ್ಥೆಯಲ್ಲಿ ನನ್ನ ತಂದೆ ಅಣ್ಣಪ್ಪ ಮತ್ತು 1 ನೇ ಪ್ರತಿವಾದಿ ಅನೀಲ ಕುಮಾರ ಪಾಲುದಾರರ ಅಗಿದ್ದರು ಅನ್ನುವುದು ನಿಜ. ಅ ಸಮಯದಲ್ಲಿ ನಾನು ನೌಕರಿ ಮಾಡುತ್ತಿದ್ದೆ ಅನ್ನುವುದು ನಿಜ. 1968 ರ ಕ್ಕಿಂತ 1 ವರ್ಷ ನಾನು ಬೆಳಗಾವಿಯ ಅರ ಎಲ ಎಸ ಕಾಲೇಜದಲ್ಲಿ ಪ್ರಾಧ್ಯಾಪಕ ಅಂತಾ ಕೆಲಸ ಮಾಡಿದ್ದೆ ಅನ್ನುವುದು ನಿಜ. 1968 ರಿಂದ 2002 ರ ವರೆಗೆ ಬೈಲಹೂಂಗಲದ ಕೆ ಅರ ಸಿ ಕಾಲೇಜದಲ್ಲಿ ಪ್ರಾದ್ಯಾಪಕ ಅಂತಾ ಕೆಲಸ ಮಾಡುತಿದ್ದೆ. 1971 ರಲ್ಲಿ Partnership Firm ಪ್ರಾರಂಬವಾದಾಗ ಸದರಿ ಪರ್ಮಗೆ ನಾನು ಯಾವುದೇ ರೀತಿಯ ಆರ್ದಿಕ ಸಹಾಯ ಮಾಡಿರುವುದಿಲ್ಲ ಅನ್ನುವುದು ನಿಜ. ಸದರಿ Partnership Firm ದಲ್ಲಿ ನನ್ನ ತಂದೆಗೆ ಶೇಕಡಾ 60 ರಷ್ಟು ಮತ್ತು 1 ನೇ ಪ್ರತಿವಾದಿಗೆ ಶೇಕಡಾ 40 ರಷ್ಟು ಲಾಭಾಂಶವನ್ನು ಪಡೆದುಕೂಳ್ಳಬೇಕು ಅಂತಾ ಒಪ್ಪಂದ ಇತ್ತು ಅನ್ನುವುದು ನಿಜ. 1971 ರ Partnership ಡೀಡ ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿ ಬರೆದ ವಿಷಯ ನಿಜ ಇರುತ್ತದೆ ಅನ್ನುವುದು ನಿಜ. ಸದರ Partnership Firm ದಲ್ಲಿ ನನಗಾಗಲೀ , 1 ನೇ ವಾದಿ ವಿಜಯ ಕುಮಾರನಾಗಲೀ ಯಾವುದೇ ಹಿಸ್ಸೆ ಇರುವುದಿಲ್ಲ ಅಂದರೆ ಸಾಕ್ಷಿದಾರರು ನೇರವಾಗಿ ನಮಗೆ ಯಾವುದೇ ಪಾಲು ಇರುವುದಿಲ್ಲ ಅಂತಾ ಹೇಳುತ್ತಾರೆ. ಸದರಿ Partnership Firm ನ್ನು 1 ನೇ ಪ್ರತಿವಾದಿ ಸಾಕಷ್ಟು ಅಬಿವೃದ್ದಿ ಪಡಿಸಿರುತ್ತಾನೆ ಅನ್ನುವುದು ಸುಳ್ಳು . ನನ್ನ ತಂದೆಯೇ 1 ನೇ ಪ್ರತಿವಾದಿಗೆ ಮೆಡಿಕಲ ಅಂಗಡಿಯಲ್ಲಿ ಕುಳಿತುಕೊಳ್ಳಲು ಒತ್ತಾಯಿಸುತ್ತಿದ್ದರು ಅನ್ನುವುದು ಸುಳ್ಳು .

1971 ರಲ್ಲಿ ಮೆಡಿಕಲ ಅಂಗಡಿಯನ್ನು ಪ್ರಾರಂಬಿಸಲು ನನ್ನ ತಂದೆಯ ಹೆಸರಿಲ್ಲಿ ಲೈಸ್ಸೆನ ಪಡೆದುಕೂಂಡಿದ್ದು , ನಂತರ 1 ನೇ ಪ್ರತಿವಾದಿಯ ಹೆಸರಿನಲ್ಲಿ ಲೈಸೆನ್ಸ ಪಡೆದುಕೂಂಡಿರುತ್ತಾರೆ ಅನ್ನುವುದು

ಸುಳ್ಳು ಈಗ M/s. Vijay Medical & General Stores ಸಾಕಷ್ಟು ಅದಾಯ ಬರುತ್ತದೆ ಅನ್ನುವುದು ನಿಜ. ಸದರಿ ಅದಾಯವನ್ನು ಹೇಗಾದರೂ ಮಾಡಿ ನಾವು ಪಡೆದುಕೂಳ್ಳಬೇಕೆಂಬ ದುರುದ್ದೇಶ ಇಟ್ಟುಕೊಂಡಿರುತ್ತೇವೆ ಅನ್ನುವುದು ಸುಳ್ಳು .

ದಿಃ 01-04-1992 ರಂದು , 1971 ರ Partnership Deed ನ್ನು Reconstitute ಮಾಡಿರುತ್ತಾರೆ ಅನ್ನುವುದು ನಿಜ. Reconstitute Partnership Deed ನನ್ನ ತಂದೆ ಮತ್ತು ಅನೀಲ ಕುಮಾರು ಪ್ರತಿವಾದಿಯಲ್ಲಿ ಹೆಸರಿನಲ್ಲಿ ಅಗಿರುತ್ತದೆ ಅನ್ನುವುದು ನಿಜ. 1992 ರಲ್ಲಿ Reconstitute Partnership Deed ನ್ನು ನಾನು ಓದಿ ನೋಡಿರುವುದಿಲ್ಲ. ಅ ಸಂದರ್ಬದಲ್ಲಿ ಕೂಡಾ ಅದು M/s. Vijay Medical & General Stores ಅನ್ನುವ ಹೆಸರಿನಲ್ಲಿ ನೋಂದಾಗಿರುತ್ತದೆ ಅನ್ನುವುದು ನಿಜ. ಅ ಸಂದರ್ಬದಲ್ಲಿ ಕೂಡಾ ನಾನು ನೌಕರಿಯಲ್ಲಿ ಇದ್ದೆ ಅನ್ನುವುದು ನಿಜ. ಸಂದರ್ಬದಲ್ಲಿ ಕೂಡಾ ನಾನು ಯಾವುದೇ ಆರ್ದಿಕ ಸಹಾಯ ಮಾಡಿರುವುದಿಲ್ಲ ಅನ್ನುವುದು ನಿಜ.

ಈಗ ನನಗೆ ತೋರಿಸುತ್ತಿರುವ ನಿಪಿ-5 ಪಡಿತರ ಚಿಟಿಯಲ್ಲಿ ಅದೂ ಯಾವ ವರ್ಷ ತೆಗೆದಿರುತ್ತದೆ ಅಂತಾ ಬರೆದಿರುವುದಿಲ್ಲ ಅನ್ನುವುದು ಸುಳ್ಳು . ಆದರೇ ಅದರಲ್ಲಿ ದಿಃ 15-04-2009 ರಂದು ಕೊಟ್ಟಿರುತ್ತದೆ ಅಂತಾ ಬರೆದಿರುತ್ತಾರೆ. ನಾನು 2011 ರಿಂದ ಬೈಲಹೊಂಗಲದ ಪ್ರೂಪೇಸರ ಕಾಲನಿಯಲ್ಲಿ ವಾಸವಾಗಿರುತ್ತೇನೆ ಅನ್ನುವುದು ನಿಜ. ನಾನು ಹಾಗೂ 1 ನೇ ವಾದಿ ಪ್ರೂಪೇಸರ ಕಾಲನಿಯಲ್ಲಿ ವಾಸವಾಗಿರುತ್ತೇನೆ. 1 ನೇ ವಾದಿ ವಿಜಯ ಕುಮಾರ , 1 ನೇ ವಾದಿ ಅನೀಲ ಕುಮಾರನ ಕಸ್ಟಡಿಯಲ್ಲಿ ಇರುತ್ತಾನೆ ಅನ್ನುವುದು ಸುಳ್ಳು . 1 ನೇ ಪ್ರತಿವಾದಿ ಬೈಲಹೂಂಗಲದ ಬಸವ ನಗರದಲ್ಲಿ ವಾಸವಾಗಿರುತ್ತಾರೆ ಅನ್ನುವುದು ನಿಜ. 2 ನೇ ಪ್ರತಿವಾದಿ ಬೈಲಹೂಂಗಲ ಸರಾಫ ಗಲ್ಲಿಯಲ್ಲಿ ವಾಸವಾಗಿರುತ್ತಾರೆ. ನಾನು ಹಾಗೂ

ನನ್ನ ಮೂರು ಜನ ಸಹೋದರರು ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ ಅಂದರೆ ಸಾಕ್ಷಿದಾರರು ತಾನು ಹಾಗೂ 1 ನೇ ವಾದಿ ಒಂದೇ ಮನೆಯಲ್ಲಿ ವಾಸವಾಗಿದ್ದು, 1 ಮತ್ತು 2 ನೇ ಪ್ರತಿವಾದಿಯರು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿರುತ್ತಾರೆ ಅಂತಾ ಹೇಳುತ್ತಾರೆ.

ಈ ಹಂತದಲ್ಲಿ ಎ ಎ ಕೆ ವಕಿಲರು ಸಮಯ ಕೋರಿದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿತು)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.